# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿನ ಸಿ.ಎ./ಅಮೆನಿಟಿ ನಿವೇಶನ ಗಳನ್ನು ಹಂಚಿಕೆ ಮಾಡುವಲ್ಲಿ ಅನುಸರಿಸಬೇಕಾದ ವಿಧಿ-ವಿಧಾನಗಳ ಬಗ್ಗೆ.

**ಓದಲಾಗಿದೆ:**
1) ಸರ್ಕಾರದ ಆದೇಶ ಸಂಖ್ಯೆ ಸಿಐ 180 ಎಸ್‌ಪಿಕ್ಯು 2017, ದಿನಾಂಕ 08.03.2019.
2) ದಿನಾಂಕ 13.10.2023ರಂದು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.

*****

**ಪ್ರಸ್ತಾವನೆ:**

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿನ ಸಿ.ಎ./ಅಮೆನಿಟಿ ನಿವೇಶನಗಳನ್ನು ಹಂಚಿಕೆ ಮಾಡುವಾಗ ಅನುಸರಿಸಬೇಕಾದ ವಿಧಿ-ವಿಧಾನಗಳನ್ನು ನಿಗಧಿಪಡಿಸಿ ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಅನುಮೋದನೆ ನೀಡಲಾಗಿದೆ.

ಹಾಲಿ ಕೆ.ಐ.ಎ.ಡಿ.ಬಿ.ಯಲ್ಲಿ ಸಿ.ಎ. ನಿವೇಶನಗಳ ಹಂಚಿಕೆಯ ಸಂಪೂರ್ಣ ಮೊತ್ತವನ್ನು upfront ಪಾವತಿಸಿಕೊಳ್ಳುತ್ತಿದ್ದರೂ ಸಹ ಹಂಚಿಕೆದಾರರಿಗೆ 99 ವರ್ಷಗಳ ಲೀಸ್ ಆಧಾರದ ಮೇಲೆ ನೀಡಲಾಗುತ್ತಿದೆ. ಆದರೆ, ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಸಿ.ಎ. ನಿವೇಶನಕ್ಕೆ ಹಂಚಿಕೆಯ ಶೇ. 10ರಷ್ಟು ಮೊತ್ತವನ್ನು ಮಾತ್ರ ಪಡೆದು, 30 ವರ್ಷಗಳ ಲೀಸ್ ಆಧಾರದ ಮೇಲೆ ಹಂಚಿಕೆ ಮಾಡಲಾಗುತ್ತಿದೆ.

ಮೇಲೆ ಓದಲಾದ (2)ರ ಪರಿಶೀಲನಾ ಸಭೆಯಲ್ಲಿ ಪ್ರಸ್ತುತ ಇರುವ ಕೆ.ಐ.ಎ.ಡಿ.ಬಿ.ಯ ಸಿ.ಎ. ನಿವೇಶನಗಳ ಹಂಚಿಕೆಗಳ ಮಾರ್ಗಸೂಚಿಗಳನ್ನು ಬದಲಾಯಿಸುವುದು ಅವಶ್ಯಕವಿದೆ ಎಂದು ಅಭಿಪ್ರಾಯಪಡಲಾಗಿದ್ದು, ಅದರಂತೆ, ಸಿ.ಎ. ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ಪರಿಷ್ಕೃತ ಮಾರ್ಗಸೂಚಿಗಳನ್ನು ಸರ್ಕಾರದಿಂದ ಹೊರಡಿಸಲು ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

ಆದುದರಿಂದ, ಸರ್ಕಾರವು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ

## ಸರ್ಕಾರದ ಆದೇಶ ಸಂಖ್ಯೆ ಸಿಐ 78 ಎಸ್‌ಪಿಕ್ಯು 2021, ಬೆಂಗಳೂರು, ದಿನಾಂಕ 10.11.2023

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಅಭಿವೃದ್ಧಿಪಡಿಸಿರುವ ಕೈಗಾರಿಕಾ ಪ್ರದೇಶಗಳಲ್ಲಿ ಸಿ.ಎ./ ಅಮೆನಿಟಿ ನಿವೇಶನಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡ ವಿಧಿ-ವಿಧಾನಗಳನ್ವಯ ಹಂಚಿಕೆ ಮಾಡಲು ಆದೇಶಿಸಲಾಗಿದೆ:

1) ಸಿ.ಇ.ಒ.&ಇ.ಎಂ., ಕೆ.ಐ.ಎ.ಡಿ.ಬಿ.ರವರು ಲಭ್ಯವಿರುವ ಸಿ.ಎ./ಅಮೆನಿಟಿ ನಿವೇಶನಗಳಲ್ಲಿ ಕೈಗಾರಿಕಾ ಪ್ರದೇಶಗಳಿಗೆ ಒದಗಿಸಬೇಕಾದ ಚಟುವಟಿಕೆಗಳು/ ಸೌಕರ್ಯಗಳನ್ನು ಅಧಿಸೂಚನೆ ಸಂಖ್ಯೆ ಸಿಐ 78 ಎಸ್‌ಪಿಕ್ಯು 2021, ದಿನಾಂಕ: 10.11.2023 ರನ್ವಯ ಮೀಸಲಿಡಬೇಕು.

2) ಸಿ.ಎ./ಅಮೆನಿಟಿ ನಿವೇಶನಗಳ ಹಂಚಿಕೆಗೆ ಕನ್ನಡ ಹಾಗೂ ಆಂಗ್ಲ ದಿನಪತ್ರಿಕೆಗಳಲ್ಲಿ ಜಾಹೀರಾತು ನೀಡಬೇಕು. ಜಾಹೀರಾತಿನಲ್ಲಿ ಸಿ.ಎ./ಅಮೆನಿಟಿ ನಿವೇಶನಗಳ ಸ್ಥಳ, ಉದ್ದೇಶ ಮತ್ತು ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಹಂಚಿಕೆಗೆ ಅಗತ್ಯವೆಂದು ಪರಿಗಣಿಸಬಹುದಾದ ಇತರೆ ಮಾನದಂಡಗಳ ವಿವರಗಳನ್ನು ಪ್ರಚಾರಪಡಿಸಬೇಕು. ಹಂಚಿಕೆಗೆ ಇರುವ ಮಾನದಂಡಗಳನ್ನು ಸಿ.ಇ.ಒ.&ಇ.ಎಂ., ಕೆ.ಐ.ಎ.ಡಿ.ಬಿ.ಯವರು ನಿಗಧಿಪಡಿಸಬೇಕು.

3) ಸ್ವೀಕರಿಸಿದ ಅರ್ಜಿಗಳನ್ನು ಸಿ.ಇ.ಒ.&ಇ.ಎಂ., ಕೆ.ಐ.ಎ.ಡಿ.ಬಿ. ರವರ ಅಧ್ಯಕ್ಷತೆಯಲ್ಲಿ ಮಂಡಳಿಯ ಅಧಿಕಾರಿಗಳೊಂದಿಗೆ ಉಪ ಸಮಿತಿಯನ್ನು ರಚಿಸಿ, ಜಾಹೀರಾತಿನಲ್ಲಿ ನೀಡಿರುವ ಮಾನದಂಡಗಳಂತೆ ಅರ್ಜಿಗಳನ್ನು ಪರಿಶೀಲಿಸುವುದು.

4) ಪರಿಶೀಲಿಸಿದ ಅರ್ಜಿಗಳನ್ನು SLSWCC ಸಭೆಯ ಮುಂದೆ ಚರ್ಚೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸುವುದು.

5) SLSWCC ಸಭೆಯಲ್ಲಿ ಸಿ.ಎ./ಅಮೆನಿಟಿ ನಿವೇಶನಗಳಲ್ಲಿ ಸ್ಥಾಪಿಸುವ ಯೋಜನೆಯ ಅನುಮೋದನೆ ಪಡೆದವರಿಗೆ ಕೆಐಎಡಿಬಿ ವತಿಯಿಂದ 10 ವರ್ಷಗಳ ಕಾಲ ಲೀಸ್ ಕಂ ಸೇಲ್ ಆಧಾರದಲ್ಲಿ ನಿವೇಶನವನ್ನು ಹಂಚಿಕೆ ಮಾಡುವುದು.

6) ಸಿ.ಎ./ಅಮೆನಿಟಿ ನಿವೇಶನಗಳಿಗೆ ಸರ್ಕಾರದ ಆದೇಶ ಸಂಖ್ಯೆ ಸಿಐ 132 ಎಸ್‌ಪಿಕ್ಯು (ಇ) 2021, ದಿನಾಂಕ 01.01.2022ರನ್ವಯ ಶುದ್ಧ ಕ್ರಯ ಪತ್ರಗಳನ್ನು ನೆರವೇರಿಸುವುದು.

7) ಪ್ರಸ್ತಾವಿತ ಮೇಲಿನ ನೀತಿಯು KIADB ಯ ಅಸ್ತಿತ್ವದಲ್ಲಿರುವ ಸಿ.ಎ./ಅಮೆನಿಟಿ ನಿವೇಶನಗಳ ಗುತ್ತಿಗೆಗಳಿಗೂ ಅನ್ವಯಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ ಸಿಐ 180 ಎಸ್‌ಪಿಕ್ಯು 2017, ದಿನಾಂಕ 08.03.2019ನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ

(ಭೀಮಪ್ಪ ಪ. ಅಜೂರ್) 21/11/2023
ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ.)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು-ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ, ಪ್ರಕಟಿಸಿದ 100 ಪ್ರತಿಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿ(ಕೈ.ಅ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರಿಗೆ ಒದಗಿಸಲು ಕೋರಿದೆ.

ಪ್ರತಿ:

1. ಪ್ರಧಾನ ಮಹಾಲೆಖಪಾಲರು (ಜಿ&ಎಸ್‌ಎಸ್‌ಎ/ಇ&ಆರ್‌ಎಸ್‌ಎ), ಕರ್ನಾಟಕ ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೆಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560001
3. ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು.
4. ಸಿ.ಇ.ಓ.&ಇ.ಎಂ., ಕೆ.ಐ.ಎ.ಡಿ.ಬಿ., ಖನಿಜಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
5. ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು,
7. ನಿರ್ದೇಶಕರು (ತಾಂತ್ರಿಕ ಕೋಶ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
8. ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.

## PROCEEDINGS OF GOVERNMENT OF KARNATAKA

**Subject: Approval for amendments to the policy on allotment of land by Karnataka Industrial Areas Development Board – reg.**

**Read:**
1) **Government Order No: CI 511 SPQ 2013, dated: 07.08.2014.**
2) **Government Order No: CI 511 SPQ 2013, dated: 07.07.2015.**
3) **Government Order No: CI 15 SPQ 2017, dated: 09.03.2017.**
4) **Government Order No: CI 105 SPI 2017, dated: 11.07.2017.**
5) **Government Order No: CI 96 SPQ 2018, dated: 15.09.2018.**

---*---

**PREAMBLE:-**

**The Government vide Order read at (5) above has issued Corrigendum Order for Government Orders read at (1) to (4) above, to approve the allotment of land by KIADB in their industrial areas on lease for a period of 99 years excluding Micro, Small and Medium Enterprises up to 2 acres of land, Central Government Undertakings/ PSU's, State Government Undertakings/ PSU's, Central-State Joint Venture Companies, Single Unit Complexes, Housing Complexes, Super Mega Enterprises and the projects identified by the Government as critical and prestigious.**

**As per the above Government Orders, the sale deed shall be executed to Single Unit Complexes only at the end of 15 years and to Micro, Small and Medium Enterprises only at the end of 10 years, even though the project has been implemented and utilized more than 50% of the area allotted.**

**In the meetings held on 19.08.2021 and 01.09.2021 under the chairmanship of Hon'ble Minister for Large & Medium Industries, the following decisions were taken:**

- ಈ ಮೊದಲು ಯೋಜನೆ / ಘಟಕವನ್ನು ಅನುಷ್ಠಾನಗೊಳಿಸಿ, ಕೆ.ಐ.ಎ.ಡಿ.ಬಿ. ನಿಯಮಾವಳಿ ಪ್ರಕಾರ ಕನಿಷ್ಠ ಶೇ.51ರಷ್ಟು ಜಮೀನನ್ನು ಉಪಯೋಗಿಸಿದ ನಂತರ, ಲೀಸ್-ಕಮ್-ಸೇಲ್ ಕರಾರು ಪತ್ರದಲ್ಲಿರುವ abridgement clause ನಂತೆ ಶುದ್ಧ ಕ್ರಯ ಪತ್ರವನ್ನು ಕೆ.ಐ.ಎ.ಡಿ.ಬಿ.ಯು ನೆರವೇರಿಸುತ್ತಿತ್ತು.
- ಯೋಜನೆ / ಘಟಕವನ್ನು ಅನುಷ್ಠಾನಗೊಳಿಸಿ ಕೆ.ಐ.ಎ.ಡಿ.ಬಿ. ನಿಯಮಾವಳಿ ಪ್ರಕಾರ ಕನಿಷ್ಠ ಶೇ. 51ರಷ್ಟು ಜಮೀನನ್ನು ಉಪಯೋಗಿಸಿದ ನಂತರ, ಶುದ್ಧ ಕ್ರಯ ಪತ್ರವನ್ನು ನೆರವೇರಿಸಿದಲ್ಲಿ, ಘಟಕವು ಹಣಕಾಸು ಸಂಸ್ಥೆಗಳಿಂದ ದುಡಿಮೆ ಬಂಡವಾಳ ಪಡೆಯುವುದು ಸುಲಭವಾಗುತ್ತದೆ ಹಾಗೂ ಘಟಕವನ್ನು ನಡೆಸಿಕೊಂಡು ಹೋಗಲು ಅನುಕೂಲವಾಗುವುದರಿಂದ, ದಿನಾಂಕ: 07.08.2014ಕ್ಕಿಂತ ಮುಂಚಿತವಾಗಿದ್ದ ಲೀಸ್-ಕಮ್-ಸೇಲ್ ಕರಾರು ಪತ್ರದಲ್ಲಿ abridgement clause ಅನ್ನು ಅಳವಡಿಸುವುದು ಸೂಕ್ತವಾಗಿರುತ್ತದೆ.
- ಅಲ್ಲದೇ, ಹಾಲಿ ಕೆ.ಐ.ಎ.ಡಿ.ಬಿ.ಯು ಖಾಸಗಿ ಕೈಗಾರಿಕೆಗಳಿಗೆ 2 ಎಕರೆಗಿಂತ ಮೇಲ್ಪಟ್ಟು ಜಮೀನು ಹಂಚಿಕೆಯನ್ನು 99 ವರ್ಷಗಳ ಕಾಲ ಲೀಸ್ ಆಧಾರದ ಮೇಲೆ ಹಂಚಿಕೆ ಮಾಡುತ್ತಿರುವುದರಿಂದ, ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಕಷ್ಟಕರವಾಗಿರುವುದರಿಂದ ಹಾಗೂ ಲೀಸ್‌ಗೆ ಒಳಪಟ್ಟ ಭೂಮಿಯನ್ನು ಅಡಮಾನ ಪಡೆಯಲು ಒಪ್ಪುತ್ತಿಲ್ಲದಿರುವುದರಿಂದ ಹಾಗೂ ಭೂಮಿಯ ಸಂಪೂರ್ಣ ಹಂಚಿಕೆ ಮೊತ್ತವನ್ನು ಮುಂಚಿತವಾಗಿ ಪಾವತಿಸಿಕೊಳ್ಳುತ್ತಿರುವುದರಿಂದ, ಖಾಸಗಿ ಬೃಹತ್ ಕಂಪನಿಗಳು ಕೆ.ಐ.ಎ.ಡಿ.ಬಿ.ಯಿಂದ ಭೂ ಹಂಚಿಕೆಗೆ ಹಿಂದೇಟು ಹಾಕುತ್ತಿದ್ದು, ಇದರಿಂದ ರಾಜ್ಯಕ್ಕೆ ಬಂಡವಾಳ ಹೂಡಿಕೆಯು ಕುಂಠಿತವಾಗುತ್ತಿದೆ. ಆದ್ದರಿಂದ, ರಾಜ್ಯದಲ್ಲಿ ಹೆಚ್ಚಿನ ಬಂಡವಾಳವನ್ನು ಆಕರ್ಷಿಸುವ ದೃಷ್ಟಿಯಿಂದ 2014ನೇ ಸಾಲಿನ ಮುಂಚಿನಂತಿದ್ದ ಕೆ.ಐ.ಎ.ಡಿ.ಬಿ.ಯಿಂದ ಹಂಚಿಕೆ ಮಾಡುವ ಎಲ್ಲಾ ಜಮೀನುಗಳನ್ನು 10 ವರ್ಷಗಳ ಲೀಸ್-ಕಮ್-ಸೇಲ್ ಆಧಾರದ ಮೇಲೆ ಹಂಚಿಕೆ ಮಾಡುವುದು ಸೂಕ್ತವಾಗಿರುತ್ತದೆ.
- ಈ ಹಿನ್ನಲೆಯಲ್ಲಿ, ರಾಜ್ಯದಲ್ಲಿ ಹೆಚ್ಚಿನ ಬಂಡವಾಳವನ್ನು ಆಕರ್ಷಿಸುವ ದೃಷ್ಟಿಯಿಂದ ಕೆ.ಐ.ಎ.ಡಿ.ಬಿ.ಯಿಂದ ಇನ್ನು ಮುಂದೆ ಎಲ್ಲಾ ಖಾಸಗಿ ಕೈಗಾರಿಕೆಗಳಿಗೆ/ ಸಂಸ್ಥೆಗಳಿಗೆ 10 ವರ್ಷಗಳ ಲೀಸ್-ಕಮ್-ಸೇಲ್ ಆಧಾರದ ಮೇಲೆ ಹಂಚಿಕೆ ಮಾಡಲು ಹಾಗೂ ಕೆ.ಐ.ಎ.ಡಿ.ಬಿ.ಯಿಂದ ಈಗಾಗಲೇ ನೆರವೇರಿಸಿರುವ/ ನೆರವೇರಿಸುವ ಲೀಸ್-ಕಮ್-ಸೇಲ್ ಕರಾರು ಪತ್ರಗಳಲ್ಲಿ abridgement clause ಅನ್ನು ಅಳವಡಿಸಲು ಹಾಗೂ ಸದರಿ ಪ್ರಸ್ತಾವನೆಯನ್ನು ಸಚಿವ ಸಂಪುಟದ ಮುಂದೆ ಅನುಮೋದನೆಗಾಗಿ ಮಂಡಿಸಲು ತೀರ್ಮಾನಿಸಲಾಗಿದೆ.

**In view of the above, the proposal for amendments to the policy on allotment of land and execution of sale deed for allotted land on lease-cum-sale basis by KIADB was placed before the Cabinet held on 20.12.2021, for approval.**

**Hence, the following order.**

**GOVERNMENT ORDER NO: CI 132 SPQ(e) 2021,**
**BENGALURU, DATED: 01.01.2022.**

**Government has accorded approval for the following amendments to the policy on allotment of land and execution of sale deed for allotted land on lease-cum-sale basis irrespective of extent of land by Karnataka Industrial Areas Development Board (KIADB).**

**(i) To approve the allotment of land by KIADB in their Industrial Areas, including Single Unit Complexes etc., on 10 years lease-cum-sale basis and if the lessee has implemented the project and utilized more than 50% of the area allotted and has performed all the conditions of lease-cum-sale deed, the sale deed shall be executed after 2 years of continuous production from the date of commercial production, during the currency of the lease period.**

**(ii) To approve the allotment of land by KIADB to Central Government Undertaking/ PSU's, State Government Undertakings/ PSU's, Central-State Joint Venture Companies on 2 years lease-cum-sale basis and the sale deed shall be executed during the currency of the lease period or at the end of 2 years, if the lessee has implemented the project, utilized more than 50% of the area allotted and has performed all the conditions of lease-cum-sale deed.**

**(iii) To modify suitably the existing lease-cum-sale agreement of KIADB.**

**(iv) The proposed above policy will also be applicable to the existing leases of KIADB.**

**The Government Orders read at 1 – 5 above are withdrawn with immediate effect.**

This order is issued with the concurrence of the Finance Department vide Note No. FD 404 Exp-1/2021, dated 07.10.2021, Law Department vide Note No. LAW 183 OPN 2021, dated 01.10.2021 and approval of Cabinet in its meeting held on 20.12.2021 vide subject no. C. 423/2021.

By Order and in the name of
Governor of Karnataka,

N. Kumar 01/01/2022.
(N. KUMAR)
Under Secretary to Government (I.D),
Commerce and Industries Department.
01/01/2022

To:

The Compiler, Karnataka Gazette, Bengaluru for publication in the next issue of Gazette.

Copy to:

1) All Additional Chief Secretaries / Principal Secretaries / Secretaries to Government.
2) PS to Chief Secretary to Government, Vidhana Soudha.
3) PS to Principal Secretary to Hon'ble Chief Minister, Vidhana Soudha.
4) Commissioner for Industrial Development and Director, Department of Industries and Commerce, Khanija Bhavan, Race Course Road, Bengaluru-01.
5) Chief Executive Officer and Executive Member, Karnataka Industrial Areas Development Board, Khanija Bhavan, Race Course Road, Bengaluru-01.
6) All the Regional Commissioners/ Deputy Commissioners.
7) Deputy Secretary, Department of Cabinet Affairs (Cabinet Section), Vidhana Soudha (with reference to Subject No: C. 423/2021).
8) PS to Hon'ble Minister for Large & Medium Industries, Vidhana Soudha.
9) All Joint Directors, District Industrial Centers.
10) All Officers in KIADB.
11) PS to Additional Chief Secretary to Government, Commerce and Industries Department, Vikasa Soudha.
12) PA to Director (Technical Cell), Commerce and Industries Department, Vikasa Soudha.
13) Section Guard File / Spare copies.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿನ ಸಿ.ಎ. ನಿವೇಶನಗಳ ಹಂಚಿಕೆಯಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡದ ಸಂಸ್ಥೆ/ಉದ್ಯಮದಾರರಿಗೆ ಮೀಸಲಾತಿಯನ್ನು ನಿಗಧಿ ಪಡಿಸುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ ಸಿಐ 78 ಎಸ್‌ಪಿಕ್ಯೂ 2021, ದಿನಾಂಕ:10.11.2023.
2. ಸಿಇಓ ಮತ್ತು ಇಎಂ, ಕೆಐಎಡಿಬಿ, ರವರ ಪತ್ರ ಸಂಖ್ಯೆ:KIADB/SCP-TSP/17972/2023-24, ದಿನಾಂಕ:16.01.2024.

*****

**ಪ್ರಸ್ತಾವನೆ:**

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿನ ಸಿ.ಎ. ನಿವೇಶನಗಳನ್ನು ಹಂಚಿಕೆ ಮಾಡುವಾಗ ಅನುಸರಿಸಬೇಕಾದ ವಿಧಿ-ವಿಧಾನಗಳನ್ನು ನಿಗಧಿಪಡಿಸಿ ಮೇಲೆ ಓದಲಾದ ಕ್ರಮಾಂಕ (1)ರ ಆದೇಶದಲ್ಲಿ ಹೊರಡಿಸಲಾಗಿರುತ್ತದೆ.

ಸಿಇಓ & ಇಎಂ, ಕೆಐಎಡಿಬಿ ರವರು ಮೇಲೆ ಓದಲಾದ ಕ್ರಮಾಂಕ (2)ರ ಪತ್ರದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿನ ಸಿ.ಎ. ನಿವೇಶನಗಳ ಹಂಚಿಕೆಯಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡದ ಸಂಸ್ಥೆ/ಉದ್ಯಮದಾರರಿಗೆ ಮೀಸಲಾತಿಯನ್ನು ನಿಗಧಿ ಪಡಿಸುವ ಸಂಬಂಧ ಕೆಳಕಂಡಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ನಾಗರೀಕ ಸೌಕರ್ಯ ಸೈಟುಗಳ ಹಂಚಿಕೆ) ನಿಯಮಗಳು, 1989 ರಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಸಂಸ್ಥೆಗಳಿಗೆ ನಾಗರೀಕ ಸೌಕರ್ಯ ಸೈಟುಗಳ ಹಂಚಿಕೆಯಲ್ಲಿ ಮೀಸಲಾತಿಯನ್ನು ಒದಗಿಸಿರುತ್ತದೆ.
- ಪ್ರಸ್ತುತ, ಮಂಡಳಿಯು ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಉದ್ಯಮಿಗಳಿಗೆ ಕೈಗಾರಿಕಾ ನಿವೇಶನಗಳ ಒಟ್ಟು ಹಂಚಿಕೆ ಪ್ರದೇಶದ ಶೇ. 24.10 ಅನ್ನು ಕಾಯ್ದಿರಿಸಲಾಗುತ್ತಿದೆ.
- ದಿನಾಂಕ: 26.12.2023 ರಂದು ನಡೆದ ಮಂಡಳಿ ಸಭೆಯಲ್ಲಿ ಕೆಐಎಡಿಬಿಯ ಕೈಗಾರಿಕಾ ಪ್ರದೇಶಗಳಲ್ಲಿ ಹಂಚಿಕೆಗಾಗಿ ಲಭ್ಯವಿರುವ ಒಟ್ಟು ಸಿ.ಎ. ನಿವೇಶನಗಳಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡದ ಸಂಸ್ಥೆ/ಉದ್ಯಮದಾರರಿಗೆ ಶೇ. 24.10 ಅನ್ನು ಮೀಸಲಾತಿಯನ್ನು ಒದಗಿಸಲು ಪರಿಗಣಿಸಿ, ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ ಸಿಐ 78 ಎಸ್‌ಪಿಕ್ಯೂ 2021, ಬೆಂಗಳೂರು, ದಿನಾಂಕ:05.02.2024**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿ ಹಂಚಿಕೆಗಾಗಿ ಲಭ್ಯವಿರುವ ಒಟ್ಟು ಸಿ.ಎ. ನಿವೇಶನಗಳಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡದ ಸಂಸ್ಥೆ/ಉದ್ಯಮದಾರರಿಗೆ ಶೇ. 24.10 ರಷ್ಟು ಮೀಸಲಾತಿಯನ್ನು ನಿಗಧಿಪಡಿಸಿ ಆದೇಶಿಸಿದೆ.

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ ಸಿಐ 78 ಎಸ್‌ಪಿಕ್ಯೂ 2021, ದಿನಾಂಕ:10.11.2023ರ ಆದೇಶದಲ್ಲಿನ ವಿಧಿ-ವಿಧಾನಗಳನ್ವಯ ಹಂಚಿಕೆ ಮಾಡಲು ಕ್ರಮವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ

05/02/2024

**(ಭೀಮಪ್ಪ ಪ. ಅಜೂರ್)**
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಕೈ.ಅ.).

ಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು-ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ, ಪ್ರಕಟಿಸಿದ 100 ಪ್ರತಿಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿ(ಕೈ.ಅ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರಿಗೆ ಒದಗಿಸಲು ಕೋರಿದೆ.

**ಇವರಿಗೆ:**

1. ಪ್ರಧಾನ ಮಹಾಲೆಖಪಾಲರು (ಜಿ&ಎಸ್‌ಎಸ್‌ಎ/ಇ&ಆರ್‌ಎಸ್‌ಎ), ಕರ್ನಾಟಕ ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೆಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560001
3. ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು.
4. ಸಿ.ಇ.ಒ.&ಇ.ಎಂ., ಕೆ.ಐ.ಎ.ಡಿ.ಬಿ., ಖನಿಜಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
5. ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು,
7. ನಿರ್ದೇಶಕರು (ತಾಂತ್ರಿಕ ಕೋಶ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
8. ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.

No. CI 78 SPQ 2021

Commerce & Industries Department,
Karnataka Government Secretariat,
Vikasa Soudha, Bengaluru - 560001.
Date: 10.11.2023

## NOTIFICATION

In exercise of the powers conferred by sub-section (1) of Section 2 of the Karnataka Industrial Areas Development Act (Karnataka Act 18 of 1966), the Government of Karnataka hereby specified the following as amenities for the purpose of the said Act:

1) R&D Centers;
2) Innovation-Centre of Excellence;
3) Technical Institutes, Skill Development/Training Institutes, Educational Institutions;
4) Government/PSU Offices;
5) Banks;
6) Hospitals/Dispensaries;
7) Hotels;
8) ICD;
9) Air Cargo Complex;
10) Weigh Bridges;
11) Petrol/Gas Station;
12) Canteens;
13) Housing Tenements/Apartments/Dormitories for the employees of industries.

Notification issued vide No. CI 86 SPQ 90, dated 13.03.1991 is withdrawn with immediate effect.

They shall come into force from the date of their publication in the Official Gazette.

By order and in the name of
the Governor of Karnataka,

10/11/2023

(BHIMAPPA P. AJOOR)
Under Secretary to Government
Commerce & Industries Dept.(ID)

To:

1. The Compiler, Karnataka Rajyapatra, Bangalore to publish in the next issue, requested to furnish 100 copies of the published to the Under Secretary to Government,(Industrial Development)Department of Commerce and Industries.
2. Principal Accountant General (GA&SSA)/(E&RSA), Karnataka, New Building, Audit Bhavan, Bengaluru.

3. Principal Accountant General (A&E) Karnataka, Park house road, Bengaluru.
4. Additional Chief Secretary to Government, Finance Department, Vidhanasoudha, Bengaluru.
5. Commissioner for Industrial Development and Director of Industries and Commerce, Khanija Bhavana, Race course road, Bengaluru.
6. Chief Executive Officer and Executive Member, Karnataka Industrial Area Development Board, Khanija Bhavana, Race course road, Bengaluru.
7. Director (Technical Cell), Commerce and Industries Department, Vikasasoudha, Bengaluru.
8. PS to Honourable Minster for Large and Medium Industries and Infrastructure Development Department, Vidhanasoudha, Bengaluru.
9. PS to Principal Secretary to Commerce and Industries Department, Vikasasoudha, Bengaluru.
10. Guard file/Spare Copies.